# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

**6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003**

## ಫಲಿತಾಂಶ ಪಟ್ಟಿಯನ್ನು ಪಡೆಯಲು ಮಾರ್ಗಸೂಚಿ

## Guidelines to obtain Result Sheet

- 1964 ರಿಂದ ಫಲಿತಾಂಶ ಪಟ್ಟಿಯು ಮಂಡಳಿಯಲ್ಲಿ ಲಭ್ಯವಿದ್ದು, ಮಂಡಳಿಯಲ್ಲಿ ಆಯಾ ವರ್ಷದ ಏಪ್ರಿಲ್ /ಜೂನ್ ಮಾಹೆಯ ಫಲಿತಾಂಶ ಪ್ರಕಟವಾದ ನಂತರದಲ್ಲಿ ಸಂಬಂಧಪಟ್ಟಂತೆ ಎಲ್ಲಾ ಶಾಲೆಗಳಿಗೆ ಫಲಿತಾಂಶಪಟ್ಟಿಯನ್ನು ವಿತರಿಸಲಾಗುತ್ತಿತ್ತು.

- ಪ್ರಸ್ತುತ 2019 ರಿಂದ ಮಂಡಳಿಯ ಜಾಲತಾಣದಲ್ಲಿ ಸಂಬಂಧಿಸಿದ ಶಾಲಾ ಮುಖ್ಯಶಿಕ್ಷಕರ ಲಾಗಿನ್‌ನಲ್ಲಿ download ಮಾಡಿಕೊಳ್ಳತಕ್ಕದ್ದು.

- ಒಂದು ವೇಳೆ ವಿತರಿಸಲಾದ ಎಸ್.ಎಸ್.ಎಲ್.ಸಿ. ಫಲಿತಾಂಶ ಪಟ್ಟಿಗಳು ಕಳೆದು ಹೋಗಿದ್ದಲ್ಲಿ ಅಥವಾ ಹಾಳಾಗಿದ್ದಲ್ಲಿ, ಅಂತಹ ಫಲಿತಾಂಶ ಪಟ್ಟಿಯನ್ನು ಪಡೆಯಲು ಮಂಡಳಿಯಲ್ಲಿ ಅವಕಾಶ ಕಲ್ಪಿಸಲಾಗಿದೆ.

- ಸಂಬಂಧಿಸಿದ ಶಾಲಾ ಮುಖ್ಯಶಿಕ್ಷಕರು ಕಳೆದು ಹೋದ ವರ್ಷದ ಫಲಿತಾಂಶ ಪಟ್ಟಿಯನ್ನು ಪಡೆಯಬೇಕಾದಲ್ಲಿ, ಎಸ್.ಎಸ್.ಎಲ್.ಸಿ ಫಲಿತಾಂಶ ಪಟ್ಟಿ ಕಳೆದು ಹೋದ ಬಗ್ಗೆ ರೂ.20/-ಗಳ ಛಾಪಾಕಾಗದವನ್ನು ಇ-ಸ್ಟಾಂಪ್ ಮೂಲಕ First party ಮುಖ್ಯಶಿಕ್ಷಕರ ಹೆಸರಿನಲ್ಲಿ Second party ಕೆ.ಎಸ್.ಇ.ಇ.ಬಿ ಹೆಸರಿನಲ್ಲಿ ಖರೀದಿಸಿ, ನ್ಯಾಯಾಲಯ / ನೋಟರಿಯವರಿಂದ ಅಫಿಡವಿಟ್ ಪಡೆದು ಸಲ್ಲಿಸಬೇಕು. ಸದರಿ ಅಫಿಡವಿಟ್‌ನಲ್ಲಿ ಯಾವ ಕಾರಣದಿಂದ ಕಳೆದು ಹೋಗಿದೆ ಎಂದು ಸ್ಪಷ್ಟಪಡಿಸಿರಬೇಕು.

- ಸರ್ಕಾರದ ಆದೇಶ ಸಂಖ್ಯೆ ಇಡಿ 355 ಎಸ್‌ಎಲ್‌ಬಿ 2017, ಬೆಂಗಳೂರು ದಿನಾಂಕ: 16-09-2019 ರನ್ವಯ ಒಂದು ವರ್ಷದ ಫಲಿತಾಂಶದ ಪಟ್ಟಿಗೆ ನಿಗದಿತ ಶುಲ್ಕ ರೂ.1000/- ಗಳು ಆಗಿದ್ದು, ನಿಗಧಿತ NEFT ಚಲನ್ ಮೂಲಕ ಯಾವುದೇ ರಾಷ್ಟ್ರೀಕೃತ ಬ್ಯಾಂಕ್ ಮೂಲಕ ಮಂಡಳಿಗೆ ಪಾವತಿಸತಕ್ಕದ್ದು.

**ಸರ್ಕಾರದ ಆದೇಶ ಸಂಖ್ಯೆಇಡಿ 355 ಎಸ್.ಎಲ್.ಬಿ 2017 ದಿನಾಂಕ: 16-09-2019ರಂತೆ, ನಿಗದಿತ ಶುಲ್ಕದ ವಿವರ:**

| ಸೇವೆಗಳ ವಿವರ | ನಿಗದಿಪಡಿಸಲಾದ ಶುಲ್ಕ |
|---|---|
| ಏಪ್ರಿಲ್ / ಜೂನ್ ಫಲಿತಾಂಶ ಪಟ್ಟಿಯನ್ನು (Result Sheet) ಪಡೆಯಲು ಶಾಲಾ ಮುಖ್ಯಶಿಕ್ಷಕರು ಪಡೆಯಲು ಪ್ರತಿ ವರ್ಷಕ್ಕೆ ನಿಗಧಿಪಡಿಸಿದ ಶುಲ್ಕ | ರೂ.1000/- |